ಮೆ: ಮೈಲಾರ ಶುಗರ್ಸ್ ಲಿಮಿಟೆಡ್ ಇವರು ಬಳ್ಳಾರಿ ಜಿಲ್ಲೆ ಹೂವಿನಹಡಗಲಿ ತಾಲ್ಲೂಕು ಬೀರಬ್ಬಿ ಗ್ರಾಮದ ಸರ್ವೆ ನಂ.241/ಸಿ3, 158/2, 251/ಎ, 257/1, 248/1, 267/ಬಿ, 248/ಬಿ/1ಬಿ, 263/2ಎ, 269/ಸಿ, 240/ಎ, 247/ಎ, 241/ಬಿ, 243/ಎ, 247/ಬಿ, 247/ಡಿ, 241/ಸಿ1, 241/ಸಿ2 ಮತ್ತು ಸರ್ವೆ ನಂ.157/3, 157/1 ಕೋಟೆಹಾಳ್ ಗ್ರಾಮದಲ್ಲಿ ಹಾಲಿ ಇರುವ ಕಬ್ಬು ಅರಿಯುವ ಉತ್ಪಾದನಾ ಸಾಮರ್ಥ್ಯವನ್ನು 3500 ಟಿಸಿಡಿ ಯಿಂದ 10,000 ಟಿಸಿಡಿಗೆ ಮತ್ತು ಸಹ ವಿದ್ಯುತ್ ಘಟಕದ ಸಾಮರ್ಥ್ಯವನ್ನು 14 ಮೆಗಾವ್ಯಾಟ್‌ನಿಂದ 60 ಮೆಗಾವ್ಯಾಟ್‌ಗೆ ಹೆಚ್ಚಿಸಲು ಹಾಗೂ 120 ಕೆಎಲ್‌ಪಿಡಿ ಸಾಮರ್ಥ್ಯದ ಡಿಸ್ಟಲರಿ ಘಟಕ ಮತ್ತು ಇನ್ಸಿನೆರೇಷನ್ ಬಾಯ್ಲರ್ ಉಪಯೋಗಿಸಿ 5 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುವ ಘಟಕಗಳನ್ನು ಸ್ಥಾಪಿಸುವ ಸಂಬಂಧ ದಿನಾಂಕ : 23-10-2017ರಂದು ಬೆಳಿಗ್ಗೆ 11.00 ಗಂಟೆಗೆ ಮೆ: ಮೈಲಾರ ಶುಗರ್ಸ್ ಲಿಮಿಟೆಡ್ (ಯೋಜನಾ ಸ್ಥಳ), ಬೀರಬ್ಬಿ ಗ್ರಾಮ, ಹೂವಿನಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇಲ್ಲಿ ಜರುಗಿದ ಪರಿಸರ ಸಾರ್ವಜನಿಕ ಸಭೆಯ ನಡುವಳಿಗಳು.

| | | |
|---|---|---|
| 1) ಪರಿಸರ ಸಾರ್ವಜನಿಕ ಸಭೆ ನಡೆದ ಸ್ಥಳ | : | ಮೆ: ಮೈಲಾರ ಶುಗರ್ಸ್ ಲಿಮಿಟೆಡ್, ಬೀರಬ್ಬಿ ಗ್ರಾಮ, ಹೂವಿನಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ |
| 2) ಹಾಜರಿದ್ದ ಅಧಿಕಾರಿಗಳ ವಿವರ | : | ಅನುಬಂಧ-1 |
| 3) ಉದ್ದಿಮೆದಾರರ ವತಿಯಿಂದ ಹಾಜರಿದ್ದ ಪ್ರತಿನಿಧಿಗಳ ವಿವರ | : | ಅನುಬಂಧ-2 |
| 4) ಭಾಗವಹಿಸಿದ ಸಾರ್ವಜನಿಕರ ವಿವರ | : | ಅನುಬಂಧ-3 |
| 5) ಸಾರ್ವಜನಿಕರು ಸಲ್ಲಿಸಿದ ಅಹವಾಲುಗಳು | : | ಅನುಬಂಧ-4 |
| 6) ಯೋಜನೆದಾರರು ಮಂಡಿಸಿದ ಪ್ರಸ್ತಾವಿತ ಯೋಜನೆಯ ಸಾರಾಂಶ: | | ಅನುಬಂಧ-5 |

**ಪೀಠಿಕೆ :**

ಮೆ: ಮೈಲಾರ ಶುಗರ್ಸ್ ಲಿಮಿಟೆಡ್ ಇವರು ಬಳ್ಳಾರಿ ಜಿಲ್ಲೆ ಹೂವಿನಹಡಗಲಿ ತಾಲ್ಲೂಕು ಬೀರಬ್ಬಿ ಗ್ರಾಮದ ಸರ್ವೆ ನಂ.241/ಸಿ3, 158/2, 251/ಎ, 257/1, 248/1, 267/ಬಿ, 248/ಬಿ/1ಬಿ, 263/2ಎ, 269/ಸಿ, 240/ಎ, 247/ಎ, 241/ಬಿ, 243/ಎ, 247/ಬಿ, 247/ಡಿ, 241/ಸಿ1, 241/ಸಿ2 ಮತ್ತು ಸರ್ವೆ ನಂ.157/3, 157/1 ಕೋಟೆಹಾಳ್ ಗ್ರಾಮದಲ್ಲಿ ಹಾಲಿ ಇರುವ ಕಬ್ಬು ಅರಿಯುವ ಉತ್ಪಾದನಾ ಸಾಮರ್ಥ್ಯವನ್ನು 3500 ಟಿಸಿಡಿ ಯಿಂದ 10,000 ಟಿಸಿಡಿಗೆ ಮತ್ತು ಸಹ ವಿದ್ಯುತ್ ಘಟಕದ ಸಾಮರ್ಥ್ಯವನ್ನು 14 ಮೆಗಾವ್ಯಾಟ್‌ನಿಂದ 60 ಮೆಗಾವ್ಯಾಟ್‌ಗೆ ಹೆಚ್ಚಿಸಲು ಹಾಗೂ 120 ಕೆಎಲ್‌ಪಿಡಿ ಸಾಮರ್ಥ್ಯದ ಡಿಸ್ಟಲರಿ ಘಟಕ ಮತ್ತು ಇನ್ಸಿನೆರೇಷನ್ ಬಾಯ್ಲರ್ ಉಪಯೋಗಿಸಿ 5 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುವ ಘಟಕಗಳನ್ನು ಸ್ಥಾಪಿಸುವ ಸಂಬಂಧ ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುತ್ತದೆ. ಅರಣ್ಯ ಮತ್ತು ಪರಿಸರ ಮಂತ್ರಾಲಯ, ಭಾರತ ಸರ್ಕಾರ ಇವರು ದಿನಾಂಕ: 14.09.2006 (ತಿದ್ದುಪಡಿ ದಿನಾಂಕ : 01-12-2009)ರಂದು ಹೊರಡಿಸಿರುವ ಅಧಿಸೂಚನೆ ಪ್ರಕಾರ ಸದರಿ ಯೋಜನೆಗೆ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ. ಅದರಂತೆ ನಿರ್ದೇಶಕರು, ಅರಣ್ಯ ಮತ್ತು ಪರಿಸರ ಮಂತ್ರಾಲಯ, ಭಾರತ ಸರ್ಕಾರ ಇವರು ಸದರಿ ಯೋಜನೆಯ Terms of Reference (TOR) ಅಂತಿಮಗೊಳಿಸಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಪರಿಸರ ಸಾರ್ವಜನಿಕ ಸಭೆಯನ್ನು ನಡೆಸಲು ಕೋರುವಂತೆ ಉದ್ದಿಮೆದಾರರಿಗೆ ತಿಳಿಸಿರುತ್ತಾರೆ. ಅದರಂತೆ ಈ ಯೋಜನೆಯ ಸಂಕ್ಷಿಪ್ತ ವರದಿಯನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ತಯಾರಿಸಿ, ಪರಿಸರ ಆಘಾತ ಅಧ್ಯಯನ ವರದಿಯೊಂದಿಗೆ ಮಂಡಳಿಗೆ ಸಲ್ಲಿಸಿ ಕೇಂದ್ರ ಸರ್ಕಾರದ ಪರಿಸರ ಆಘಾತ ಅಧ್ಯಯನ ಅಧಿಸೂಚನೆ, 2006ರ ಪ್ರಕಾರ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವಂತೆ ಸದರಿ ಉದ್ದಿಮೆದಾರರು ಕೋರಿಕೊಂಡಿರುತ್ತಾರೆ.ಈ ಹಿನ್ನಲೆಯಲ್ಲಿ ಪರಿಸರ ಸಾರ್ವಜನಿಕ ಸಭೆಯನ್ನು ಯೋಜನಾ ಸ್ಥಳದಲ್ಲಿ ದಿನಾಂಕ : 23-10-2017ರಂದು ಬೆಳಿಗ್ಗೆ 11.00 ಗಂಟೆಗೆ ಏರ್ಪಡಿಸಲಾಗಿತ್ತು.

ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು, ಪರಿಸರ ಸಾರ್ವಜನಿಕ ಸಭೆಯ ಪತ್ರಿಕಾ ಪ್ರಕಟಣೆಯನ್ನು ರಾಜ್ಯ ಮಟ್ಟದ ಪತ್ರಿಕೆಗಳಾದ "ಡೆಕ್ಕನ್ ಹೆರಾಲ್ಡ್" (ಆಂಗ್ಲ) ಮತ್ತು "ವಿಜಯಕರ್ನಾಟಕ" (ಕನ್ನಡ) ದಿನ ಪತ್ರಿಕೆಗಳಲ್ಲಿ ದಿನಾಂಕ : 22-09-2017ರಂದು ಹಾಗೂ ಸ್ಥಳೀಯ ಪತ್ರಿಕೆಸಂಜೆವಾಣಿಯಲ್ಲಿ ದಿನಾಂಕ : 23-09-2017 ಮತ್ತು 21-10-2017ರಂದು ಪತ್ರಿಕಾ ಪ್ರಕಟಣೆಯನ್ನು ನೀಡಿ ಯೋಜನೆಯ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರ ಆಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ ಟಿಪ್ಪಣಿಗಳು ಹಾಗೂ ಅಹವಾಲುಗಳನ್ನು ಮೌಖಿಕವಾಗಿ / ಲಿಖಿತ / ಇ-ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ, ಬಳ್ಳಾರಿ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳೊಳಗೆ ಸಲ್ಲಿಸುವಂತೆ ತಿಳಿಸಿ ಪತ್ರಿಕಾ ಪ್ರಕಟಣೆನೀಡಲಾಗಿತ್ತು. ಇದಲ್ಲದೇ ಉದ್ದೇಶಿತ ಯೋಜನೆಯ ಸುತ್ತಮುತ್ತಲಿನ ಹಳ್ಳಿಗಳಾದ ಬೀರಬ್ಬಿ ಗ್ರಾಮ, ಅರಳಿಹಳ್ಳಿ, ಅಂಗೂರು, ಕೋಟಿಹಾಳ್, ಹೊಸಹಳ್ಳಿ, ಅರಳಿಹಳ್ಳಿ ತಾಂಡ, ಕಾಳೇನಹಳ್ಳಿ, ಹಿರೇಹಡಗಲಿ, ತುಂಬಿನಕೆರೆ ಮತ್ತು ತುಂಬಿಕೆರೆ ತಾಂಡಗ್ರಾಮಗಳಲ್ಲಿ ಧ್ವನಿವರ್ಧಕ ಮತ್ತು ಕರಪತ್ರ ಹಂಚುವ ಮೂಲಕ ಸದರಿ ಪರಿಸರ ಸಾರ್ವಜನಿಕ ಸಭೆಯ ಕುರಿತು ಪ್ರಚಾರ ಕೈಗೊಳ್ಳಲಾಗಿರುತ್ತದೆ.

ದಿನಾಂಕ : 23-10-2017ರಂದು ಬೆಳಿಗ್ಗೆ 11.00ಗಂಟೆಗೆ ಮೆ: ಮೈಲಾರ್ ಶುಗರ್ಸ್ ಲಿಮಿಟೆಡ್, ಬೀರಬ್ಬಿ ಗ್ರಾಮ, ಹೂವಿನಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇಲ್ಲಿ ಪರಿಸರ ಸಾರ್ವಜನಿಕ ಸಭೆಯು ಪ್ರಾರಂಭವಾಯಿತು. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿಯ ಪರಿಸರ ಅಧಿಕಾರಿಗಳಾದ ಡಾ.ದೊಡ್ಡಶಾನಯ್ಯ ಇವರು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ಜಿಲ್ಲೆ, ಬಳ್ಳಾರಿ ಇವರನ್ನು ಹಿರಿಯ ಪರಿಸರ ಅಧಿಕಾರಿಗಳು, ವಿಭಾಗೀಯ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬಳ್ಳಾರಿ ಇವರನ್ನು ಹಾಗೂ ಸದರಿ ಸಭೆಗೆ ಆಗಮಿಸಿದಂತಹ ಎಲ್ಲಾ ರೈತರನ್ನು, ಸಾರ್ವಜನಿಕರನ್ನು ಸ್ವಾಗತಿಸಿ ಈ ಸಭೆಗೆ ಜಿಲ್ಲಾಧಿಕಾರಿಗಳು ಸಭೆಯ ಅಧ್ಯಕ್ಷತೆ ವಹಿಸಿ ನಡೆಸಿಕೊಡಬೇಕೆಂದು ಕೋರಿದರು.

ಡಾ. ವಿ.ರಾಮ್‌ಪ್ರಸಾತ್ ಮನೋಹರ್ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ಜಿಲ್ಲೆ, ಬಳ್ಳಾರಿ ಇವರು ಈ ಸಭೆಯಲ್ಲಿ ಭಾಗವಹಿಸಿದ ಸಾರ್ವಜನಿಕರಿಗೆ ಮತ್ತು ಸುತ್ತಮುತ್ತಲಿನ ಗ್ರಾಮಸ್ಥರಿಗೆ ಪರಿಸರ ಸಾರ್ವಜನಿಕ ಸಭೆಯ ಉದ್ದೇಶವನ್ನು ತಿಳಿಸುತ್ತಾ ತಮಗೆ ಯೋಜನೆಯ ಕುರಿತು ಇನ್ನು ಹೆಚ್ಚಿನ ಮಾಹಿತಿ ಬೇಕಿದ್ದಲ್ಲಿ ಕೇಳಬಹುದಾಗಿರುತ್ತದೆಂದು ತಿಳಿಸಿದರು. ನಂತರ ಸದರಿ ಉದ್ದಿಮೆಯ ಮುಖ್ಯಸ್ಥರಿಗೆ ಯೋಜನೆಯ ಕಾರ್ಯಚಟುವಟಿಕೆಗಳ ಬಗ್ಗೆ ಮತ್ತು ಸಂಭವಿಸಬಹುದಾದಂತಹ ಮಾಲಿನ್ಯ ಹಾಗೂ ನಿಯಂತ್ರಣ ಕ್ರಮಗಳ ಬಗ್ಗೆ ವಿವರವಾದ ವರದಿಯನ್ನು ಸಾರ್ವಜನಿಕರಿಗೆ ತಿಳಿಸುವಂತೆ ಸೂಚಿಸಿದರು. ಮೆ: ಮೈಲಾರ ಶುಗರ್ಸ್ ಲಿಮಿಟೆಡ್ ಇವರ ಪರವಾಗಿ ಮೆ: ಎನ್ವಿರಾನ್ಮೆಂಟಲ್ ಹೆಲ್ತ್ ಅಂಡ್ ಸೇಫ್ಟಿ ಕನ್ಸಲ್ಟೆನ್ಸಿ ಪ್ರೈ. ಲಿ ಬೆಂಗಳೂರು ಇವರು ಉದ್ದೇಶಿತ ಯೋಜನೆಗೆ ಸಂಬಂಧಿಸಿದ ತಾಂತ್ರಿಕ ವರದಿಯನ್ನು ಮಂಡಿಸಿದರು ಹಾಗೂ ಈ ಯೋಜನೆಯ ಅಗತ್ಯತೆಯ ಬಗ್ಗೆ ಮತ್ತು ಯೋಜನೆಯ ವಿವರಗಳನ್ನು ನೀಡಿದರು.ಈ ವರದಿಯಲ್ಲಿ ಯೋಜನೆಯಿಂದ ಗಾಳಿ, ನೀರು ಮತ್ತು ಭೂಮಿಯ ಮೇಲಾಗುವ ಆಘಾತ ಹಾಗೂ ಸಾಮಾಜಿಕ, ಆರ್ಥಿಕ ಪರಿಸ್ಥಿತಿಗಳ ಮೇಲಾಗುವ ಪರಿಣಾಮಗಳನ್ನು ಮತ್ತು ಮಾಲಿನ್ಯ ನಿಯಂತ್ರಣ ಕ್ರಮಗಳ ಬಗ್ಗೆ ಸಂಕ್ಷಿಪ್ತ ವರದಿಯನ್ನು ಮಂಡಿಸಿದರು.ಯೋಜನೆದಾರರು ಮಂಡಿಸಿದ ಪ್ರಸ್ತಾವಿತ ಯೋಜನೆಯ ಸಾರಾಂಶವನ್ನುಅನುಬಂಧ-5ರಲ್ಲಿ ಲಗತ್ತಿಸಿದೆ.

ಉದ್ದೇಶಿತ ಯೋಜನೆಯ ವಿಸ್ತೃತ ವರದಿ ಮಂಡಿಸಿದ ನಂತರ ಪರಿಸರ ಸಾರ್ವಜನಿಕ ಸಭೆಯ ಅಧ್ಯಕ್ಷರು ಸಭೆಯಲ್ಲಿ ಪಾಲ್ಗೊಂಡಿರುವ ಸಾರ್ವಜನಿಕರಿಗೆ ಈ ಯೋಜನೆಯ ಕುರಿತು ತಮ್ಮ ಸಲಹೆ/ಅಭಿಪ್ರಾಯ/ ಅನಿಸಿಕೆಗಳನ್ನು ಮೌಖಿಕವಾಗಿ ಅಥವಾ ಲಿಖಿತವಾಗಿ ವ್ಯಕ್ತಪಡಿಸುವಂತೆ ತಿಳಿಸಿದರು.ಅದರಂತೆ ಸಭೆಯಲ್ಲಿ ಭಾಗವಹಿಸಿದ್ದ ಈ ಕೆಳಕಂಡ ಸಾರ್ವಜನಿಕರುತಮ್ಮ ಅಭಿಪ್ರಾಯವನ್ನು ತಿಳಿಸಿದರು.

**1. ಶ್ರೀ ಮಾಧವರಾವ್, ನಂದಿಗಾವಿ ಗ್ರಾಮ ಹರಿಹರ ತಾಲ್ಲೂಕು ಖಳಸನೂರು ಕೃಷಿ ಸಹಕಾರ ಸಂಘದ ನಿರ್ದೇಶಕರು :**

ಇವರು ಜಿಲ್ಲೆಯಲ್ಲಿ ಈಗಾಗಲೇ ಇರುವ ಸಕ್ಕರೆ ಕಾರ್ಖಾನೆಗಳು ಮುಚ್ಚಿದ್ದು ಕಬ್ಬು ಅರಿಯಲು ದೂರದ ಕಾರ್ಖಾನೆಗಳಿಗೆ ಹೋದಾಗ ಅಲ್ಲಿ ಚಾಲಕರು ಸಾಲಿನಲ್ಲೆ ನಿಲ್ಲಿಸಿ ಕಿರುಕುಳವನ್ನು ಅನುಭವಿಸುವಂತಾಗಿತ್ತು. ಮೈಲಾರ್ ಶುಗರ್ಸ್‌ನವರು ಈ ಭಾಗದಲ್ಲಿ ಕಾರ್ಖಾನೆಯನ್ನು ಸ್ಥಾಪಿಸಿ ಸುತ್ತಮುತ್ತ ಬೆಳೆದಿರುವ ಎಲ್ಲಾ ಕಬ್ಬನ್ನು ಸಕಾಲಕ್ಕೆ ಅರೆಯುವುದರ ಜೊತೆಗೆ ಕಟಾವು ಮಾಡಲು ಮತ್ತು ಸಾಗಣೆ ಮಾಡಲು ತುಂಬಾ ಸಹಕಾರ ನೀಡಿರುತ್ತಾರೆ. ಜೊತೆಗೆ ಕಂಪನಿಯವರು ರೈತ ಸ್ನೇಹಿಯಾಗಿ ಕಂಪನಿ ನಡೆಸುತ್ತಿದ್ದು ಸದರಿ ಕಂಪನಿಗೆ 3500 ಟಿಸಿಡಿ ಯಿಂದ 10000 ಟಿಸಿಡಿಗೆ ವಿಸ್ತರಣೆ ಮಾಡಲು ಅನುಮತಿ ನೀಡಬೇಕೆಂದು ಅಧ್ಯಕ್ಷರನ್ನು ಕೋರಿದರು.

**2. ಶ್ರೀ ನಾಗೇಂದ್ರ ಮುದ್ದಿ, ಗುಯಿಲಗುಂದಿ ಗ್ರಾಮ, ಹಾವೇರಿ ಜಿಲ್ಲೆ :**

ಇವರು ತಾವು ಕಬ್ಬು ಸಾಗಾಣಿಕೆ ಮಾಡಲು ರೇಣುಕಾ ಶುಗರ್ಸ್‌ಗೆ ಹೋದಾಗ ಕಿಲೋ ಮೀಟರ್ ಗಟ್ಟಲೆ ಕಬ್ಬು ತುಂಬಿದ ಲಾರಿಗಳು ಮತ್ತು ಎತ್ತಿನ ಬಂಡಿಗಳು ನಿಂತಿದ್ದು ಕಬ್ಬು ವಿಲೇವಾರಿ ಮಾಡಲು ತುಂಬಾ ಕಷ್ಟ ಅನುಭವಿಸಬೇಕಾಗಿತ್ತು. ಆ ಸಮಯದಲ್ಲಿ ಅಲ್ಲಿನ ಅವ್ಯವಸ್ಥೆ ಮತ್ತು ರೈತರು ಅನುಭವಿಸಿದ ಕಷ್ಟ ಕಾರ್ಪಣ್ಯಗಳು ಮರೆಯುವಂತಿಲ್ಲ. ಈ ಮೈಲಾರ ಶುಗರ್ಸ್ ಕಾರ್ಖಾನೆ ಇಲ್ಲಿ ಆಗಿರುವುದರಿಂದ ನಮಗೆ ಸಾಗಾಣಿಕೆ ವೆಚ್ಚ ಕಡಿಮೆಯಾಗಿದ್ದು ಚಾಲಕರಿಗೆ ಯಾವುದೇ ಕಿರಿಕಿರಿ ಆಗುತ್ತಿರುವುದಿಲ್ಲ. ಕಾರ್ಖಾನೆಯು ಹತ್ತಿರದಲ್ಲೇ ಇರುವುದರಿಂದ ಕಬ್ಬಿನ ತೂಕದ ಇಳುವರಿ ಹೆಚ್ಚಿ ರೈತರು ಹೆಚ್ಚಿನ ಆದಾಯ ಹೊಂದಬಹುದಾಗಿರುತ್ತದೆ ಆದ್ದರಿಂದ ಈ ಕಾರ್ಖಾನೆಯ ಉದ್ದೇಶಿತ ಯೋಜನೆಯು ಅನುಷ್ಠಾನಗೊಳ್ಳಬೇಕೆಂದು ತಿಳಿಸಿದರು.

**3. ಶ್ರೀ ಪರಶುರಾಮ ದೊಡ್ಡಮನಿ, ಭೂ ಸಂಪತ್ತು ಸಂರಕ್ಷಣಾ ಸಮಿತಿ ರಾಜ್ಯ ಉಪಾಧ್ಯಕ್ಷರು, ಅಂಗೂರು ಗ್ರಾಮ :**

ಇವರು ತಾವು ಕಬ್ಬು ಸಾಗಾಣಿಕೆ ಮಾಡಲು ಶಾಮನೂರು ಶುಗರ್ಸ್‌ಗೆ ಹೋದಾಗ ಕಿಲೋ ಮೀಟರ್ ಗಟ್ಟಲೆ ಕಬ್ಬು ತುಂಬಿದ ಲಾರಿಗಳು ನಿಂತಿದ್ದು ಚಾಲಕರಿಗೆ ಸರಿಯಾದ ವ್ಯವಸ್ಥೆ ಇಲ್ಲದೇ ತುಂಬಾ ಪರಿಪಾಟಲು ಪಡಬೇಕಾಗಿತ್ತು ಮೈಲಾರ್ ಶುಗರ್ಸ್ ಇಲ್ಲಿ ಸ್ಥಾಪನೆಯಾಗಿರುವುದರಿಂದ ಸಾಗಾಣಿಕಾ ಸಮಯದ ಅವಧಿ ತಗ್ಗಿ ಕಬ್ಬಿನ ತೂಕ ಹೆಚ್ಚುತ್ತದೆ ಅದರಿಂದ ಹೆಚ್ಚಿನ ಆದಾಯ ಹೊಂದುವಂತಾಗಿದೆ. ಪ್ರಸ್ತುತ ಮೈಲಾರ್ ಶುಗರ್ಸ್ ಕಾರ್ಖಾನೆಯಿಂದ ಪರಿಸರಕ್ಕೆ ಯಾವುದೇ ತೊಂದರೆಯಾಗುತ್ತಿರುವುದಿಲ್ಲ. ಆದರೆ ಕಾರ್ಖಾನೆಯವರು ಸ್ಥಳೀಯರಿಗೆ ಉದ್ಯೋಗವನ್ನು ಕೊಡಬೇಕು ಮತ್ತು ಸ್ಥಳೀಯ ರೈತರಿಗೆ ಕಬ್ಬು ಬೆಳೆಯಲು ಪ್ರೋತ್ಸಾಹ ಕೊಟ್ಟು ಕಬ್ಬು ಅರಿಯುವ ಸಮಯದಲ್ಲಿ ಸ್ಥಳೀಯ ರೈತರಿಗೆ ಮೊದಲ ಪ್ರಾಶಸ್ತ್ಯ ಕೊಡಬೇಕೆಂದು ಕೋರಿದರು. ಮತ್ತು ಬೀರಬ್ಬ ಗ್ರಾಮವನ್ನು ದತ್ತು ತೆಗೆದುಕೊಂಡು ಶೌಚಾಲಯ ಮತ್ತು ಇತರೇ ಸೌಲಭ್ಯಗಳನ್ನು ಒದಗಿಸಬೇಕೆಂದು ಕೋರಿದರು. ಮತ್ತು ನದಿಯಿಂದ ಪಂಪ್‌ಸೆಟ್ ಜೋಡಿಸಿ ರೈತರ ವ್ಯವಸಾಯಕ್ಕೆ ಅನುಕೂಲಮಾಡಿಕೊಡಬೇಕೆಂದು ವಿನಂತಿಸಿದರು.

**4. ಶ್ರೀ ಎಸ್.ಚಂದ್ರಪ್ಪ, ಪ್ರಗತಿಪರ ರೈತರು, ಹ್ಯಾರಡ ಗ್ರಾಮ :**

ಇವರು ಮಾತಾನಾಡುತ್ತಾ ಕಾರ್ಖಾನೆಯವರು ಸ್ಥಾಪನೆ ಮಾಡುವ ಮೊದಲು ಸುತ್ತಮುತ್ತಲಿನ ಹಳ್ಳಿಗಳಿಗೆ ಬೇಟಿಕೊಟ್ಟು ರೈತರ ಮನವೊಲಿಸಿ ತಮ್ಮ ಕಾರ್ಖಾನೆಗೆ ಕಬ್ಬು ಸರಬರಾಜು ಮಾಡುವಂತೆ ತಿಳಿಸಿದರು. ಅದರಂತೆ ಇಲ್ಲಿ

ಬೆಳೆದ ಎಲ್ಲಾ ಕಬ್ಬನ್ನು ತಾವು ತೆಗೆದುಕೊಂಡು ಅರೆಯುವ ಮೂಲಕ ಮತ್ತು ಬೇರೆ ಕಾರ್ಖಾನೆಗಳಿಗಿಂತ ಹೆಚ್ಚಿನ ಧರಕೊಟ್ಟು ಕಬ್ಬನ್ನು ಖರೀದಿಸಿ ರೈತರಿಗೆ ಅನುಕೂಲಮಾಡಿಕೊಟ್ಟಿರುತ್ತಾರೆ. ಕಬ್ಬನ್ನು ಕಡಿಯುವುದರಿಂದ ಹಿಡಿದು ಸಾಗಾಣಿಕೆ ಮಾಡುವುದರವರೆಗೆ ಕಾರ್ಖಾನೆಯವರು ಜವಾಬ್ದಾರಿಯನ್ನು ತೆಗೆದುಕೊಂಡಿರುತ್ತಾರೆ ಮತ್ತು ಸಾಗಾಣಿಕೆಯ ವೆಚ್ಚ ತುಂಬಾ ಕಡಿಮೆಯಾಗಿರುತ್ತದೆ. ಉದ್ದಿಮೆಯ ಸಾಮಾಜಿಕ ಜವಾಬ್ದಾರಿ (ಸಿ.ಎಸ್.ಆರ್) ಅಡಿಯಲ್ಲಿ ಸುತ್ತಮುತ್ತಲಿನ ಗ್ರಾಮಗಳಲ್ಲಿ ಈಗಾಗಲೇ ಕ್ರಮವಹಿಸಿರುತ್ತಾರೆ. ಮತ್ತು ಬೇರೆ ಕಾರ್ಖಾನೆಗಳಿಗಿಂತ ಕಬ್ಬಿಗೆ ಹೆಚ್ಚಿನ ದರ ನೀಡಿರುತ್ತಾರೆ ಮತ್ತು ಸ್ಥಳೀಯರಿಗೆ ಉದ್ಯೋಗಾವಕಾಶವನ್ನು ಮಾಡಿಕೊಟ್ಟಿರುತ್ತಾರೆ. ಆದ್ದರಿಂದ ಮೈಲಾರ್ ಶುಗರ್ಸ್‌ನವರ ಉದ್ದೇಶಿತ ಯೋಜನೆಗೆ ಅನುಮತಿ ದೊರಕಿಸಿಕೊಡಬೇಕೆಂದು ತಿಳಿಸಿರುತ್ತಾರೆ.

**5. ಶ್ರೀ ಚೆನ್ನವೀರಗೌಡ್ರು, ಎಪಿಎಂಸಿ ನಿರ್ದೇಶಕರು, ಹೊಳಲು :**

ಇವರು ಮಾತನಾಡುತ್ತಾ ಸದರಿ ಕಾರ್ಖಾನೆಯವರು ಬೇರೆ ಕಾರ್ಖಾನೆಗಳಿಗಿಂತ ಹೆಚ್ಚಿನ ದರಕೊಟ್ಟು ಕಬ್ಬನ್ನು ಖರೀದಿಸುತ್ತಿದ್ದು ರೈತರಿಗೆ ಅನುಕೂಲ ಮಾಡಿರುತ್ತಾರೆ. ಇಲ್ಲಿ ಕಾರ್ಖಾನೆ ಸ್ಥಾಪನೆಯಾಗುವುದರಿಂದ ಎಲ್ಲಾ ರೈತರಿಗೆ ಅನುಕೂಲವಾಗುತ್ತದೆ ಆದ್ದರಿಂದ ಮೈಲಾರ್ ಶುಗರ್ಸ್‌ನವರ ಉದ್ದೇಶಿತ ಯೋಜನೆಗೆ ಅನುಮತಿ ದೊರಕಿಸಿಕೊಡಬೇಕೆಂದು ತಿಳಿಸಿರುತ್ತಾರೆ.

**6. ಶ್ರೀ ಸಣ್ಣಬಸಪ್ಪ ನಾರಮ್ಮನವರ್, ರೈತರು, ಹೊಳಲು :**

ಇವರು ಮಾತನಾಡುತ್ತಾ ಸದರಿ ಕಾರ್ಖಾನೆಯು ಇಲ್ಲಿ ಸ್ಥಾಪನೆಯಾಗುವುದರಿಂದ ಸುತ್ತಮುತ್ತಲ ರೈತರಿಗೆ ಅನುಕೂಲವಾಗುತ್ತದೆ. ಆದರೆ ಮಾಲಿನ್ಯ ನಿಯಂತ್ರಣ ಮಂಡಳಿಯವರು ಕಾಲಕಾಲಕ್ಕೆ ಕಾರ್ಖಾನೆಯಿಂದ ಉಂಟಾಗುವ ಮಾಲಿನ್ಯದ ಬಗ್ಗೆ ಮಾನಿಟರಿಂಗ್ ಮಾಡಬೇಕೆಂದು ಮತ್ತು ಅದನ್ನು ಸುತ್ತಲಿನ ರೈತರಿಗೆ ತಿಳಿಸುವುದರ ಜೊತೆಗೆ ಸುತ್ತಮುತ್ತಲ ಗ್ರಾಮಗಳಿಗೆ ಅರಿವು ಮೂಡಿಸುವುದರ ಬಗ್ಗೆ ಕ್ರಮಕೈಗೊಳ್ಳಬೇಕೆಂದು ಕೋರಿರುತ್ತಾರೆ. ಅಲ್ಲದೇ ಕಬ್ಬು ಬೆಳೆಯುವುದರ ಬಗ್ಗೆ ಕೃಷಿ ತಜ್ಞರು ರೈತರಿಗೆ ನೆರವಾಗಬೇಕೆಂದು ಸಭಾಧ್ಯಕ್ಷರನ್ನು ಕೋರಿದರು. ಮೈಲಾರ್ ಶುಗರ್ಸ್ ಸ್ಥಾಪನೆಯಾಗುವುದರಿಂದ ರೈತರಿಗೆ ಅನುಕೂಲವಾಗುತ್ತದೆಂದು ತಿಳಿಸಿದರು.

**7. ಶ್ರೀ ಶಾಂತರಾಜ್, ನಿವೃತ್ತ ಮುಖ್ಯ ಶಿಕ್ಷಕರು, ಮಾಗಳ :**

ಇವರು ಮಾತನಾಡುತ್ತಾ ಜಗತ್ತಿನಲ್ಲಿ ನಮ್ಮನ್ನು ನಾವು ಬದಲಾವಣೆ ಮಾಡಿಕೊಂಡರೇ ಇಡೀ ಜಗತ್ತನೇ ಬದಲಾಯಿಸಬಹುದು ಎಂಬ ವಾಕ್ಯದೊಂದಿಗೆ ಆರಂಭಿಸಿ ಮೈಲಾರ್ ಶುಗರ್ಸ್ ಕಾರ್ಖಾನೆಯ ಹತ್ತಿರದಲ್ಲಿಯೇ ಅರಣ್ಯ ಇರುವುದರಿಂದ ಕಾರ್ಖಾನೆಗೆ ಅನುಕೂಲವಾಗುತ್ತದೆ ಮತ್ತು ಸುತ್ತಮುತ್ತಲಿನ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆ. ಇಲ್ಲಿ ಉತ್ಪತ್ತಿಯಾಗುವ ವಿದ್ಯುತ್‌ನಿಂದ ಸುತ್ತಮುತ್ತಲಿನ ಗ್ರಾಮಗಳಿಗೆ ಅನುಕೂಲವಾಗುತ್ತದೆ. ಆದ್ದರಿಂದ ಈ ಉದ್ದೇಶಿತ ಯೋಜನೆಗೆ ಅನುಮತಿ ದೊರಕಿಸಿಕೊಡಬೇಕೆಂದು ತಿಳಿಸಿರುತ್ತಾರೆ.

**8. ಶ್ರೀ ಆರ್.ಎಸ್.ರಂಗಾರೆಡ್ಡಿ, ಕೃಷಿ ಉತ್ಪನ್ನ ಮಾರುಕಟ್ಟೆ ಮಾಜಿ ಅಧ್ಯಕ್ಷರು, ರಾಣೇಬೆನ್ನೂರು :**

ಇವರು ಮಾತನಾಡುತ್ತಾ ಇಲ್ಲಿ ಕಾರ್ಖಾನೆ ಬರುವುದಿರಿಂದ ಸುತ್ತಮುತ್ತಲಿನ ರೈತರಿಗೆ ಅನುಕೂಲವಾಗುತ್ತದೆ ಆದ್ದರಿಂದ ಕಾರ್ಖಾನೆ ಉದ್ದೇಶಿತ ಯೋಜನೆಗೆ ಅನುಮತಿ ನೀಡಬೇಕೆಂದು ತಿಳಿಸಿದರು.

**9. ಶ್ರೀ ಪ್ರಕಾಶ್ ಜಂಗಳಿ, ಅಂಗೂರು ಗ್ರಾಮ :**

ಇವರು ಮಾತನಾಡುತ್ತಾ ಇಲ್ಲಿ ಕಾರ್ಖಾನೆ ಸ್ಥಾಪನೆಯಾಗಿರುವುದರಿಂದ ಸುತ್ತಮುತ್ತಲ ರೈತರಿಗೆ ಅನುಕೂಲ ಆಗಿರುವುದರ ಜೊತೆಗೆ ರೈತರಲ್ಲಿ ಹೊಸ ಹುಮ್ಮಸ್ಸು ಮೂಡಿದೆ ಮತ್ತು ಹೆಚ್ಚು ಪ್ರದೇಶದಲ್ಲಿ ಕಬ್ಬು ಬೆಳೆಸಲು



Kmagn..

ಸ್ಫೂರ್ತಿಯಾಗಿದೆ. ಈ ಕಾರ್ಖಾನೆ ಬರುವುದರಿಂದ ಎಲ್ಲರಿಗೂ ಒಳ್ಳೆಯದಾಗುತ್ತದೆ ಆದ್ದರಿಂದ ಉದ್ದೇಶಿತ ಯೋಜನೆಗೆ ಅನುಮತಿ ದೊರಕಿಸಿಕೊಡಬೇಕೆಂದು ತಿಳಿಸಿರುತ್ತಾರೆ.

**10. ಶ್ರೀ ಬಸವರಾಜ್ ಮುದ್ದಣನವರ್, ರಾಜ್ಯ ಬಿ.ಜೆ.ಪಿ ರೈತ ಕಾರ್ಯಕಾರಣಿ ಸದಸ್ಯರು, ಹೊಳಲು :**

ಇವರು ಮಾತನಾಡುತ್ತ ಮೈಲಾರ್ ಶುಗರ್ಸ್ ಕಾರ್ಖಾನೆ ಪ್ರದೇಶವು ಬಳ್ಳಾರಿ ಜಿಲ್ಲೆಯ ಕೊನೆಯ ಭಾಗದಲ್ಲಿದ್ದು ಇಲ್ಲಿ ಕಾರ್ಖಾನೆ ಸ್ಥಾಪನೆಯಾಗಿರುವುದು ಹೆಮ್ಮೆಯ ವಿಷಯ ಎಂದು ಮಾಲೀಕರಿಗೆ ಅಭಿನಂದನೆ ತಿಳಿಸಿದರು. ಮುಂದುವರೆದು ಮಾತನಾಡುತ್ತಾ ಕಾರ್ಖಾನೆ ಸ್ಥಾಪನೆಯ ನಂತರ ಸುತ್ತಮುತ್ತಲ ಪ್ರದೇಶಗಳಲ್ಲಿ ವೈದ್ಯಕೀಯ ಸೌಲಭ್ಯವನ್ನು ಒದಗಿಸಬೇಕು ಮತ್ತು ಸ್ಥಳೀಯರಿಗೆ ಉದ್ಯೋಗವನ್ನು ಕೊಡಬೇಕು ಎಂದು ತಿಳಿಸುತ್ತಾ ಕಾರ್ಖಾನೆಯ ಉದ್ದೇಶಿತ ಯೋಜನೆಗೆ ಅನುಮತಿ ನೀಡಬೇಕೆಂದು ತಿಳಿಸಿದರು.

**11. ಶ್ರೀ ಶಿವಲಿಂಗಪ್ಪ ಮಲ್ಲಪ್ಪ ಗಾಣದ, ಕೃಷಿಕರು, ದಾಸನಹಳ್ಳಿ :**

ಇವರು ಮಾತನಾಡುತ್ತಾ ಈ ಪ್ರದೇಶದಲ್ಲಿ ಕಾರ್ಖಾನೆಯು ಬರುವುದರಿಂದ ರೈತರಿಗೆ ಅನುಕೂಲವಾಗುತ್ತದೆ ಮತ್ತು ಕಾರ್ಖಾನೆಯ ಉದ್ದೇಶಿತ ಯೋಜನೆಗೆ ಅನುಮತಿ ನೀಡಬೇಕೆಂದು ತಿಳಿಸಿರುತ್ತಾರೆ.

**12. ಶ್ರೀ ಆನಂದರೆಡ್ಡಿ ಯರೇಕೊಪ್ಪಿ, ಮುಸ್ಟೂರು ಗ್ರಾಮ ಪಂಚಾಯತಿ ಸದಸ್ಯರು, ಇಟಗಿ :**

ಇಲ್ಲಿ ಕಾರ್ಖಾನೆ ಸ್ಥಾಪನೆಯಾಗಿರುವುದರಿಂದ ಸುತ್ತಮುತ್ತಲಿನ ಕಬ್ಬು ಬೆಳೆಗಾರರಿಗೆ ಅನುಕೂಲವಾಗಿದೆ. ಪ್ರಸ್ತುತ ಕಾರ್ಖಾನೆಯವರು ಬೇರೆ ಕಾರ್ಖಾನೆಗಳಿಗಿಂತ ಹೆಚ್ಚಿನ ಬೆಲೆಕೊಟ್ಟು ಕಬ್ಬು ಖರೀದಿಸುತ್ತಿರುವುದರಿಂದ ರೈತರಿಗೆ ಅನುಕೂಲವಾಗಿದೆ. ಆದ್ದರಿಂದ ಮೈಲಾರ್ ಶುಗರ್ಸ್‌ನವರ ಉದ್ದೇಶಿತ ಯೋಜನೆಗೆ ಅನುಮತಿ ದೊರಕಿಸಿಕೊಡಬೇಕೆಂದು ತಿಳಿಸಿರುತ್ತಾರೆ.

**13. ಶ್ರೀ ಮತ್ತಪ್ಪ ಬೆಂಡಿಗೇರಿ, ಬೂದನೂರು ಗ್ರಾಮ :**

ಇವರು ಮಾತನಾಡುತ್ತಾ ಈ ಪ್ರದೇಶದಲ್ಲಿ ಕಾರ್ಖಾನೆಯು ಬರುವುದರಿಂದ ರೈತರಿಗೆ ಅನುಕೂಲವಾಗುತ್ತದೆ ಮತ್ತು ಸರ್ಕಾರದಿಂದ ಏನಾದರೂ ರೈತರಿಗೆ ಸಬ್‌ಸೀಡಿ ಸಿಗುವುದಿದ್ದರೆ ಅದನ್ನು ದೊರಕಿಸಿಕೊಡಬೇಕೆಂದು ಕೋರಿದರು.

**14. ಶ್ರೀ ಪಿ.ವಿ. ಹಿರೇಮಠ, ಅಧ್ಯಕ್ಷರು, ಉತ್ತರ ಕರ್ನಾಟಕ ನವನಿರ್ಮಾಣ ಸಮಿತಿ, ಧಾರವಾಡ :**

ಇವರು ಮಾತನಾಡುತ್ತಾ ಈ ಪ್ರದೇಶದಲ್ಲಿ ಕಾರ್ಖಾನೆಯು ಬರುವುದರಿಂದ ರೈತರಿಗೆ ಅನುಕೂಲವಾಗುತ್ತದೆ. ಕಾರ್ಖಾನೆಯವರು ರೈತರಿಗೆ ಉತ್ತೇಜನ ಕೊಟ್ಟು ಕಬ್ಬು ಬೆಳೆಯಲು ಸಾಲ ಸೌಲಭ್ಯವನ್ನು ನೀಡಿ ಹೊಸ ಉತ್ಸಾಹವನ್ನು ತುಂಬುತ್ತಿದ್ದಾರೆ. ಕಾರ್ಖಾನೆ ಸ್ಥಾಪನೆಯಾಗುವುದರಿಂದ ಸ್ಥಳೀಯರಿಗೆ ಉದ್ಯೋಗದೊರಕಿ ನಿರುದ್ಯೋಗ ಸಮಸ್ಯೆ ನಿವಾರಣೆಯಾಗುತ್ತದೆ. ಕಾರ್ಖಾನೆಯವರು ಈಗಾಗಲೇ ಮರಗಿಡಗಳನ್ನು ನೆಟ್ಟಿದ್ದು ಹೆಚ್ಚು ಆಕ್ಸಿಜನ್ ನೀಡುವ ಮರಗಳನ್ನು ನೆಡುವ ನಿಟ್ಟಿನಲ್ಲಿ ಗಮನಹರಿಸಿರುತ್ತಾರೆ. ಆದ್ದರಿಂದ ಉದ್ದೇಶಿತ ಯೋಜನೆಗೆ ಅನುಮತಿ ದೊರಕಿಸಿಕೊಡಬೇಕೆಂದು ತಿಳಿಸಿರುತ್ತಾರೆ.

**15. ಶ್ರೀ ಶ್ರೀಕಾಂತಗೌಡ ಪಾಟೀಲ್, ಯಳ್ಳೂರು ಗ್ರಾಮ :**

ಇವರು ಮಾತಾನಾಡುತ್ತಾ ಕಾರ್ಖಾನೆ ಬರುವುದರಿಂದ ರೈತರಿಗೆ ಅನುಕೂಲವಾಗುತ್ತದೆಂದು ತಿಳಿಸಿದರು.

16. **ಶ್ರೀ ಎಂ.ಚೆನ್ನವೀರಪ್ಪ, ಪ್ರಗತಿಪರ ರೈತರು, ತಾವರಗೊಂದಿ :**

ಇವರು ಮಾತಾನಾಡುತ್ತಾ ಕಾರ್ಖಾನೆ ಬರುವುದರಿಂದ ರೈತರಿಗೆ ಅನುಕೂಲವಾಗುತ್ತದೆಂದು ತಿಳಿಸಿದರು.

17. **ಶ್ರೀ ಬಿಳಿಚೇಡು ಗುಡ್ಡಪ್ಪ, ಪ್ರಗತಿಪರ ರೈತರು, ಹಲುವಾಗಲು :**

ಇವರು ಮಾತಾನಾಡುತ್ತಾ ಕಾರ್ಖಾನೆ ಬರುವುದರಿಂದ ರೈತರಿಗೆ ಅನುಕೂಲವಾಗುತ್ತದೆಂದು ತಿಳಿಸಿದರು.

18. **ಶ್ರೀ ಕುರುವತ್ತಿ ಮೌನೇಶಪ್ಪ, ರೈತರು, ಹಲುವಾಗಲು :**

ಇವರು ಮಾತಾನಾಡುತ್ತಾ ಕಾರ್ಖಾನೆ ಬರುವುದರಿಂದ ರೈತರಿಗೆ ಅನುಕೂಲವಾಗುತ್ತದೆಂದು ತಿಳಿಸಿದರು.

19. **ಶ್ರೀ ಕುರುವತ್ತಿ ಸಿದ್ದಪ್ಪ, ಪ್ರಗತಿಪರ ರೈತರು, ಹಲುವಾಗಲು :**

ಇವರು ಮಾತಾನಾಡುತ್ತಾ ಕಾರ್ಖಾನೆ ಬರುವುದರಿಂದ ರೈತರಿಗೆ ಅನುಕೂಲವಾಗುತ್ತದೆ ಆದರೆ ಕಾರ್ಖಾನೆಯವರು ಕಬ್ಬಿನ ಹಣವನ್ನು ಒಂದೇ ರೈತರಿಗೆ ನೀಡಬೇಕೆಂದು ತಿಳಿಸಿದರು.

20. **ಶ್ರೀ ದೊಡ್ಡಮನಿ ಪಕ್ಕೀರೇಶ, ಬೀರಬ್ಬಿ ಗ್ರಾಮ :**

ಇವರು ಮಾತನಾಡುತ್ತಾ ಕಾರ್ಖಾನೆಯು ಸ್ಥಾಪಿತವಾಗಿರುವುದರಿಂದ ಸುತ್ತಮುತ್ತಲಿನ ಪ್ರದೇಶದಲ್ಲಿ ವಾಯುಮಾಲಿನ್ಯವಾಗುತ್ತಿದೆ ಎಂದು ತಿಳಿಸಿದರು. ಇದರ ಸಂಬಂಧವಾಗಿ ಹಾರೂಬೂದಿಯನ್ನು ಪರೀಕ್ಷಿಸಬೇಕೆಂದು ತಿಳಿಸಿದರು. ಒಂದುವೇಳೆ ಮಂಡಳಿ ಮತ್ತು ಕಾರ್ಖಾನೆಯವರು ಇದರ ಬಗ್ಗೆ ಗಮನಹರಿಸದೇ ಇದ್ದರೆ ಪ್ರತಿಭಟನೆ ಮಾಡುತ್ತೇನೆಂದು ತಿಳಿಸಿದರು.

21. **ಶ್ರೀ ಎಂ.ಮಾಲತೇಶ, ಮೈಲಾರ ಗ್ರಾಮ :**

ಇವರು ಮಾತಾನಾಡುತ್ತಾ ಕಾರ್ಖಾನೆ ಬರುವುದರಿಂದ ರೈತರಿಗೆ ಅನುಕೂಲವಾಗುತ್ತದೆಂದು ತಿಳಿಸಿದರು.

22. **ಶ್ರೀ ಕುರಿ ಶಿವಾನಂದ, ಮರಬ್ಬಿಹಾಳ ಗ್ರಾಮ :**

ಇವರು ಮಾತಾನಾಡುತ್ತಾ ಕಾರ್ಖಾನೆ ಬರುವುದರಿಂದ ರೈತರಿಗೆ ಅನುಕೂಲವಾಗುತ್ತದೆಂದು ತಿಳಿಸಿದರು.

23. **ಶ್ರೀ ಮಾಳಪ್ಪ ಗಡ್ಡಿ, ಹುಲಿಕಟ್ಟೆ ಗ್ರಾಮ :**

ಇವರು ಮಾತಾನಾಡುತ್ತಾ ಕಾರ್ಖಾನೆ ಬರುವುದರಿಂದ ರೈತರಿಗೆ ಅನುಕೂಲವಾಗುತ್ತದೆಂದು ತಿಳಿಸಿದರು.

24. **ಶ್ರೀ ಶಾಂತರಾಜ್ ಜೈನ್, ಎ.ಐ.ಎಸ್.ಎಫ್ ರಾಜ್ಯ ಕಾರ್ಯದರ್ಶಿ :**

ಇವರು ಮಾತನಾಡುತ್ತಾ ಕಾರ್ಖಾನೆ ಪ್ರದೇಶದಲ್ಲಿ ಹಸಿರು ವನವನ್ನು ಸ್ಥಾಪಿಸಬೇಕು ಅಲ್ಲಿ ಸ್ಥಳಾವಕಾಶದ ಅಭಾವವಿದ್ದರೇ ಸಾಮಾಜಿಕ ಅರಣ್ಯವನ್ನು ಅಭಿವೃದ್ಧಿ ಮಾಡಬೇಕು. ಕಾರ್ಖಾನೆಯ ಸುತ್ತಮುತ್ತ ಇರುವ ಅರಣ್ಯಗಳನ್ನು ಅಭಿವೃದ್ಧಿಪಡಿಸಿ ಪರಿಸರ ಸಮತೋಲ ಕಾಯ್ದುಕೊಳ್ಳಬೇಕು ಎಂದು ತಿಳಿಸಿದರು.

25. **ಶ್ರೀ ಶಿವಕುಮಾರಗೌಡ ಪಾಟೀಲ್, ಹಿರೇಕೆರೂರು ಗ್ರಾಮ :**

ಇವರು ಮಾತಾನಾಡುತ್ತಾ ಕಾರ್ಖಾನೆ ಬರುವುದರಿಂದ ರೈತರಿಗೆ ಮತ್ತು ಸುತ್ತಮುತ್ತಲಿನ ಸಾರ್ವಜನಿಕರಿಗೆ ಅನುಕೂಲವಾಗುತ್ತದೆಂದು ತಿಳಿಸಿದರು.

**26. ಶ್ರೀ ದೊಡ್ಡಮನಿ ದೀಳಬ್ಬ, ಬೀರಬ್ಬಿ ಗ್ರಾಮ :**

ಇವರು ಮಾತನಾಡುತ್ತಾ ನಾವು ಕುರಿ ಸಾಕಾಣಿಕೆ ಮಾಡುವವರು. ಕಾರ್ಖಾನೆ ಹತ್ತಿರದಲ್ಲೇ ಅರಣ್ಯ ಇರುವುದರಿಂದ ಕಾರ್ಖಾನೆ ಹಾರೂಬೂದಿ ಅರಣ್ಯ ಪ್ರದೇಶದಲ್ಲಿ ಬಿದ್ದು ಅದರಿಂದ ನಮ್ಮ ಕುರಿಗಳಿಗೆ ಕಾಯಿಲೆ ಬರುವ ಸಂಭವವಿರುತ್ತದೆ. ನಮಗೆ ಕುರಿ ಮೇಯಿಸಲು ಬೇರೆ ಜಾಗವಿರುವುದಿಲ್ಲ. ಆದ್ದರಿಂದ ಇದರ ಬಗ್ಗೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಿಳಿಸಿದರು.

**27. ಶ್ರೀ ನಾಗಪ್ಪ ಬಡಕುರಿ, ಬೀರಬ್ಬಿ ಗ್ರಾಮ :**

ಇವರು ಮಾತನಾಡುತ್ತಾ ಈ ಕಾರ್ಖಾನೆ ಸ್ಥಾಪನೆಗೊಂಡಿರುವುದರಿಂದ ನಮ್ಮ ಕೊಳವೆ ಬಾವಿಯ ನೀರಿನಿಂದ ವಾಸನೆ ಬರುತ್ತಿದೆ. ಕಾರ್ಖಾನೆಯ ಪಕ್ಕದಲ್ಲಿಯೇ ನಮ್ಮ ವ್ಯವಸಾಯದ ಜಮೀನಿದ್ದು ಮೊಲಾಸಿಸ್ ವಾಸನೆಯು ನಿತ್ಯವು ಬರುತ್ತಿರುವುದರಿಂದ ಹೊಲದಲ್ಲಿ ಕೆಲಸ ಮಾಡಲು ಕಷ್ಟವಾಗುತ್ತದೆ ಆದ್ದರಿಂದ ಇದರ ಬಗ್ಗೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕು ಮತ್ತು ಉದ್ದೇಶಿತ ಯೋಜನೆಯನ್ನು ವಿರೋಧಿಸುವುದಾಗಿ ತಿಳಿಸಿದರು.

**28. ಶ್ರೀ ಯಶವಂತ, ಬೀರಬ್ಬ ಗ್ರಾಮ :**

ಇವರು ಮಾತನಾಡುತ್ತಾ ಕಾರ್ಖಾನೆಯವರು ತಮ್ಮ ಕಾರ್ಖಾನೆಯಲ್ಲಿ ಉತ್ಪತ್ತಿಯಾಗುವ ಕಸವನ್ನು ತಂದು ನಮ್ಮ ಹೊಲದಲ್ಲಿ ಹಾಕುತ್ತಾರೆ ಇದರಿಂದ ನಮ್ಮ ಪ್ರದೇಶದಲ್ಲಿ ನೀರು ಹಾಳಾಗಿದೆ. ಕಸವನ್ನು ಹಾಕಿ ಬೆಂಕಿ ಇಡುವುದರಿಂದ ವಾಯುಮಾಲಿನ್ಯ ಉಂಟಾಗುತ್ತಿದ್ದು ನಮಗೆ ಕೆಲಸ ಮಾಡಲು ತೊಂದರೆಯಾಗುತ್ತಿದೆ. ಆದ್ದರಿಂದ ಉದ್ದೇಶಿತ ಕಾರ್ಖಾನೆಯ ಯೋಜನೆಯನ್ನು ವಿರೋಧಿಸುವುದಾಗಿ ತಿಳಿಸಿರುತ್ತಾರೆ.

**29. ಶ್ರೀ ಜೆ.ಎಸ್.ಮಠದ್, ಚನ್ನೂರ್ :**

ಇವರು ಮಾತಾನಾಡುತ್ತಾ ಕಾರ್ಖಾನೆ ಬರುವುದರಿಂದ ರೈತರಿಗೆ ಅನುಕೂಲವಾಗುತ್ತದೆಂದು ತಿಳಿಸಿದರು.

**30. ಶ್ರೀ ಎ.ನಾಗರಾಜ್, ಮರಬ್ಬಿಹಾಳ ಗ್ರಾಮ :**

ಇವರು ಮಾತಾನಾಡುತ್ತಾ ಕಾರ್ಖಾನೆ ಬರುವುದರಿಂದ ರೈತರಿಗೆ ಅನುಕೂಲವಾಗುತ್ತದೆಂದು ತಿಳಿಸಿದರು.

**31. ಶ್ರೀ ಟಿ.ವೆಂಕಟೇಶ, ಪ್ರಧಾನಕಾರ್ಯದರ್ಶಿ, ಹಸಿರುಸೇನೆ, ಹೊಸಪೇಟೆ :**

ಇಲ್ಲಿ ಕಾರ್ಖಾನೆ ಬರುವುದರಿಂದ ಸುತ್ತಮುತ್ತಲ ರೈತರಿಗೆ ಅನುಕೂಲವಾಗಿದೆ ಜಿಲ್ಲೆಯಲ್ಲಿ ಇರುವ ಕಬ್ಬು ಅರೆಯುವ ಕಾರ್ಖಾನೆಗಳು ಚಾಲನೆಯಲ್ಲಿ ಇರದೇ ಇರುವುದರಿಂದ ಈ ಕಾರ್ಖಾನೆಯು ರೈತರಿಗೆ ವರದಾನವಾಗಿದೆ. ಕಾರ್ಖಾನೆಯು ಇಲ್ಲಿ ಆಗುವುದರಿಂದರ ರೈತರಿಗೆ ಎಲ್ಲಾ ವಿಧದಲ್ಲಿ ಅನುಕೂಲವಾಗುತ್ತದೆ. ಆದ್ದರಿಂದ ಕಾರ್ಖಾನೆಯ ಉದ್ದೇಶಿತ ಯೋಜನೆಗೆ ಅನುಮತಿ ನೀಡಬೇಕೆಂದು ತಿಳಿಸಿದರು.

**32. ಶ್ರೀ ಮಲ್ಲೇಶಪ್ಪ ಮಾಳಗಿ, ತಾಳೂರು ಗ್ರಾಮ, ಹಾವೇರಿ ಜಿಲ್ಲೆ :**

ಇವರು ಮಾತಾನಾಡುತ್ತಾ ಕಾರ್ಖಾನೆ ಬರುವುದರಿಂದ ರೈತರಿಗೆ ಅನುಕೂಲವಾಗುತ್ತದೆಂದು ತಿಳಿಸಿದರು.

**33. ಶ್ರೀ ನೀಲಪ್ಪ, ಬೀರಬ್ಬಿ ಗ್ರಾಮ :**

ಇವರು ಮಾತನಾಡುತ್ತಾ ಕಾರ್ಖಾನೆಯ ಪಕ್ಕದಲ್ಲಿ ರೈತರ ಹೊಲಗಳಿದ್ದು ಈ ಕಾರ್ಖಾನೆಯಿಂದ ತುಂಬಾ ತೊಂದರೆಯಾಗುತ್ತಿದೆ. ಕಾರ್ಖಾನೆಯಿಂದ ಬರುವ ಧೂಳು ಹೊಲದಲ್ಲಿ ಶೇಖರಣೆಯಾಗಿದ್ದು ಇದರಿಂದ ವ್ಯವಸಾಯ ಮಾಡಲು ತೊಂದರೆಯಾಗುತ್ತಿದೆ. ಈ ಬಗ್ಗೆ ಯಾರೂಬ್ಬರೂ ಕ್ರಮ ತೆಗೆದುಕೊಳ್ಳುತ್ತಿಲ್ಲ. ಈ ಬಗ್ಗೆ ಕಾರ್ಖಾನೆಯವರಿಗೆ ತಿಳಿಸಿದರು ಸರಿಯಾಗಿ ಸ್ಪಂದಿಸುತ್ತಿರುವುದಿಲ್ಲ. ಈಗಾಗಲೇ ಹೊಲದಲ್ಲಿ ಬಿದ್ದಿರುವ ಧೂಳನ್ನು ಮತ್ತು ವೇಸ್ಟ್‌ನ್ನು ಎತ್ತಿಹಾಕಬೇಕು ಮತ್ತು ಬೀರಬ್ಬಿ ಗ್ರಾಮವನ್ನು ದತ್ತು ತೆಗೆದುಕೊಂಡು ಅಭಿವೃದ್ಧಿ ಮಾಡಬೇಕೆಂದು ತಿಳಿಸಿದರು.

**34. ಶ್ರೀ ಕೆಂಚಪ್ಪ ನಾಗಪ್ಪ ಮಾಳಗಿ, ಶಂಕರಕುಪ್ಪ :**

ಇವರು ಮಾತಾನಾಡುತ್ತಾ ಕಾರ್ಖಾನೆ ಬರುವುದರಿಂದ ರೈತರಿಗೆ ಅನುಕೂಲವಾಗುತ್ತದೆಂದು ತಿಳಿಸಿದರು.

**35. ಶ್ರೀ ಶಂಕ್ರಪ್ಪ ತಂಗೋಡ, ಬೀರಬ್ಬಿ ಗ್ರಾಮ :**

ಇವರು ಮಾತಾನಾಡುತ್ತಾ ಕಾರ್ಖಾನೆ ಬರುವುದರಿಂದ ರೈತರಿಗೆ ಅನುಕೂಲವಾಗುತ್ತದೆಂದು ತಿಳಿಸಿದರು ಮತ್ತು ಕಾರ್ಖಾನೆಯವರು ನಮ್ಮ ಜಮೀನುಗಳಿಗೆ ನೀರಾವರಿ ಅನುಕೂಲ ಮಾಡಿಕೊಡಬೇಕೆಂದು ಕೋರಿದರು.

ಈ ಮೇಲಿನ ಎಲ್ಲಾ ಸಾರ್ವಜನಿಕ ಅಭಿಪ್ರಾಯಗಳನ್ನು ಆಲಿಸಿದ ನಂತರ ಜಿಲ್ಲಾಧಿಕಾರಿಗಳು ಕಾರ್ಖಾನೆಯವರಿಗೆ ತಾವು ತೆಗೆದುಕೊಂಡಿರುವ ಕ್ರಮ ಮತ್ತು ಮುಂದಿನ ಯೋಜನೆಗಳ ಬಗ್ಗೆ ಸಾರ್ವಜನಿಕರಿಗೆ ತಿಳಿಸುವಂತೆ ಸೂಚಿಸಿದರು. ಅದರಂತೆ ಕಾರ್ಖಾನೆಯ **ಮಾಲೀಕರಾದ ಶ್ರೀ ಮಹಾದೇವಯ್ಯ ವೀರಯ್ಯ ಗಚ್ಚಿನಮಠ್** ಅವರು ತಿಳಿಸುತ್ತಾ,

1) ಕಾರ್ಖಾನೆಯ ವತಿಯಿಂದ ಈಗಾಗಲೇ ಮಾಲಿನ್ಯ ನಿಯಂತ್ರಣ ಮಂಡಳಿಯವರು ಸೂಚಿಸಿರುವ ಮಾನಕಗಳಿಗೆ ಅನುಗುಣವಾಗಿ ಜಲ ಮಾಲಿನ್ಯ ಮತ್ತು ವಾಯು ಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ಅಳವಡಿಸಿರುವುದಾಗಿ ತಿಳಿಸಿದರು.
2) ಕಾರ್ಖಾನೆಯಲ್ಲಿ ಪ್ರಸ್ತುತ ಸ್ಥಳೀಯರಿಗೆ ಹೆಚ್ಚಿನ ಉದ್ಯೋಗಾವಕಾಶವನ್ನು ನೀಡಿರುವುದರ ಜೊತೆಗೆ ಸರೋಜಿನಿ ಮಹಿಷಿ ವರದಿಯ ಅನುಸಾರ ಶೇಕಡ 80ರಷ್ಟು ಕನ್ನಡಿಗರಿಗೆ ಉದ್ಯೋಗವನ್ನು ಒದಗಿಸಲಾಗಿರುತ್ತದೆ.
3) ಮಾಲಿನ್ಯ ನಿಯಂತ್ರಣ ಕ್ರಮಗಳ ಒಂದು ಭಾಗವಾಗಿ ಕಾರ್ಖಾನೆಯ ಆವರಣದಲ್ಲಿ ಹೆಚ್ಚು ಆಮ್ಲಜನಕ ಉತ್ಪತ್ತಿ ಮಾಡುವ ಮರಗಳನ್ನು ತಜ್ಞರ ಸಲಹೆಯಂತೆ ನೆಡಲಾಗಿದೆ. ಈಗಾಗಲೇ 5000 ಸಾವಿರ ಸಸಿಗಳನ್ನು ನೆಟ್ಟಿದ್ದು ಇನ್ನು 5000 ಸಸಿಗಳಿಗೆ ಕೋರಿಕೆ ಸಲ್ಲಿಸಲಾಗಿದ್ದು, ಈ ವರ್ಷದಲ್ಲಿ ಒಟ್ಟು 10,000 ಸಸಿಗಳನ್ನು ನೆಡುವ ಗುರಿ ಹೊಂದಲಾಗಿದೆಯೆಂದು ತಿಳಿಸಿದರು.
4) ಕಂಪನಿಯ ಸಾಮಾಜಿಕ ಜವಾಬ್ದಾರಿ (ಸಿ.ಎಸ್.ಆರ್) ಅಡಿಯಲ್ಲಿ ಸುತ್ತಲಿನ ಹಳ್ಳಿಗಳಿಗೆ ಶೌಚಾಲಯ ನಿರ್ಮಾಣ ಮಾಡಿರುತ್ತೇವೆ ಮತ್ತು ಸ್ವಚ್ಛ ಭಾರತ್ ಅಡಿಯಲ್ಲಿ ಶೌಚಾಲಯ ನಿರ್ಮಾಣ ಮಾಡಲು ಯೋಜನೆ ರೂಪಿಸಲಾಗಿದೆ. ಅಲ್ಲದೇ ಹಳ್ಳಿಗಳ ಶಾಲಾ ಆವರಣದಲ್ಲಿ ಗಿಡನೆಡುವ ಕಾರ್ಯಕ್ರಮವನ್ನು ಯೋಜಿಸಲಾಗಿದೆ. ಒಟ್ಟಾರೆ ಮಂಡಳಿಯು ನಿಗದಿಪಡಿಸಿದ ಮಾಲಿನ್ಯ ನಿಯಂತ್ರಣಕ್ಕೆ ಸಂಬಂಧಪಟ್ಟ ಎಲ್ಲಾ ಕ್ರಮಗಳನ್ನು ಅಳವಡಿಸಲು ಬದ್ಧರಾಗಿರುವುದಾಗಿ ತಿಳಿಸಿರುತ್ತಾರೆ. ಅದರಂತೆ ಎತ್ತರ ಬೆಳೆಯುವ ಮರಗಳನ್ನು ಕಾರ್ಖಾನೆ ಸುತ್ತಲೂ ಬೆಳೆಸಲು ತೀರ್ಮಾನಿಸಿದ್ದೇವೆ.
5) ಶುದ್ಧೀಕರಿಸಿದ ತ್ಯಾಜ್ಯ ನೀರನ್ನು ಶೇಖರಿಸಲು ಸುಮಾರು 5000 ಘನಮೀಟರ್ ಸಾಮರ್ಥ್ಯದ ಕಾಂಕ್ರೀಟ್ ಟ್ಯಾಂಕ್ ನಿರ್ಮಾಣ ಮಾಡಿರುವುದಾಗಿ ತಿಳಿಸಿದ್ದು, ಶುದ್ಧೀಕರಿಸಿದ ನೀರನ್ನು ಹಸಿರು ಬೆಳೆಸಲು ಉಪಯೋಗಿಸುವುದಾಗಿ ತಿಳಿಸಿದರು.

6) ಕಾರ್ಖಾನೆಯ ಸುತ್ತಲೂ ತಂತಿ ಬೇಲಿ ಹಾಕಿರುವುದರಿಂದ ಸಾಕು ಪ್ರಾಣಿಗಳು ಒಳ ಬರುವ ಸಾಧ್ಯತೆ ಇರುವುದಿಲ್ಲ.

7) ಕಾರ್ಖಾನೆಯ ಸಮೀಪವಿರುವ ಬೀರಬ್ಬಿ ಗ್ರಾಮವನ್ನು ದತ್ತು ಪಡೆದು ಊರಿನ ಸಮಗ್ರ ಅಭಿವೃದ್ಧಿ ಮಾಡುವುದಾಗಿ ಜಿಲ್ಲಾಧಿಕಾರಿಗಳ ಸಮಕ್ಷದಲ್ಲಿ ಘೋಷಣೆ ಮಾಡಿದರು. ಅದಕ್ಕೆ ಕ್ರಿಯಾಯೋಜನೆಯನ್ನು ತಯಾರಿಸಿ ಜಿಲ್ಲಾಡಳಿತಕ್ಕೆ ಸಲ್ಲಿಸುವುದಾಗಿ ತಿಳಿಸಿದರು.

ತದನಂತರ ಜಿಲ್ಲಾಧಿಕಾರಿಗಳು ಸಾರ್ವಜನಿಕರಿಗೆ ಮತ್ತೆ ಏನಾದರೂ ತಕರಾರು / ಅಭಿಪ್ರಾಯ ಇದ್ದರೆ ತಿಳಿಸಬೇಕೆಂದು ಕೊನೆಯದಾಗಿ ಅವಕಾಶ ನೀಡಿದರು. ಅದರಂತೆ ಈಗಾಗಲೇ ಮೇಲೆ ಮಾತನಾಡಿರುವ **ಶ್ರೀ ದೊಡ್ಡಮನಿ ಪಕ್ಕೀರೇಶಪ್ಪ** ಇವರು ಮಾತನಾಡುತ್ತಾ ಕಾರ್ಖಾನೆಯ ಪಕ್ಕದಲ್ಲಿ ನಮ್ಮ ವ್ಯವಸಾಯದ ಜಮೀನಿದ್ದು ಕಾರ್ಖಾನೆಯ ಧೂಳಿನಿಂದ ಮತ್ತು ಕೊಳಚೆ ನೀರಿನಿಂದ ಬೆಳೆಗಳು ಹಾಳಾಗಿರುತ್ತವೆ. ಆದ್ದರಿಂದ ಕಾರ್ಖಾನೆಯವರು ಸೂಕ್ತ ಪರಿಹಾರವನ್ನು ಕೊಡಬೇಕೆಂದು ಮಾನ್ಯ ಜಿಲ್ಲಾಧಿಕಾರಿಗಳಲ್ಲಿ ಕೋರಿಕೆ ಸಲ್ಲಿಸಿದರು, ಒಂದುವೇಳೆ ಪರಿಹಾರ ನೀಡಲು ವಿಫಲವಾದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ತಿಳಿಸಿದರು.

ಪರಿಸರ ಸಾರ್ವಜನಿಕ ಸಭೆಯ ಅಧ್ಯಕ್ಷರಾದ ಡಾ. ವಿ.ರಾಮ್‌ಪ್ರಸಾತ್ ಮನೋಹರ್ ಜಿಲ್ಲಾಧಿಕಾರಿಗಳು ಮಾತನಾಡುತ್ತಾ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಅಧಿಕಾರಿಗಳಿಗೆ ಮೇಲಿನ ಎಲ್ಲಾ ವಿಷಯಗಳನ್ನು ಕ್ರೂಢೀಕರಿಸಿ ಸಾರ್ವಜನಿಕರ ಮುಂದೆ ಪ್ರಕಟಿಸುವಂತೆ ಸೂಚಿಸಿದರು. ಅದರಂತೆ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಅಧಿಕಾರಿಗಳಾದ ಡಾ. ದೊಡ್ಡಶಾನಯ್ಯ ಇವರು ಮೇಲಿನ ಎಲ್ಲಾ ಅಂಶಗಳನ್ನು ಕ್ರೂಢೀಕರಿಸಿ ಸಾರ್ವಜನಿಕರ ಮುಂದೆ ಪ್ರಕಟಿಸುತ್ತಾ ಒಟ್ಟು 35 ಜನರು ಮೌಖಿಕವಾಗಿ ತಮ್ಮ ಅಭಿಪ್ರಾಯವನ್ನು ಮಂಡಿಸಿದ್ದು ಅದರಲ್ಲಿ 32 ಜನರು ಕಾರ್ಖಾನೆ ಸ್ಥಾಪನೆಯ ಪರವಾಗಿ ಮತ್ತು 03 ಜನರು ವಿರೋಧ ವ್ಯಕ್ತಪಡಿಸಿರುವುದಾಗಿ ಸಭೆಗೆ ತಿಳಿಸುತ್ತಾ ಇದರ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಸುವಂತೆ ಸಾರ್ವಜನಿಕರಿಗೆ ಮತ್ತೊಮ್ಮೆ ತಿಳಿಸಲಾಯಿತು.

ಕೊನೆಯಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು ಪರಿಸರ ಸಾರ್ವಜನಿಕ ಸಭೆಯ ನಡುವಳಿಯ ಸಂಪೂರ್ಣ ಸಾರಾಂಶವನ್ನು ಸಾರ್ವಜನಿಕರಿಗೆ ತಿಳಿಸುತ್ತಾ ಕಾರ್ಖಾನೆಯ ಉದ್ದೇಶಿತ ಯೋಜನೆಯ ಪರವಾಗಿ 32 ಜನರು ಅಭಿಪ್ರಾಯವನ್ನು ಸಲ್ಲಿಸಿರುತ್ತಾರೆ ಮತ್ತು 03 ಜನರು ವಿರೋಧ ವ್ಯಕ್ತಪಡಿಸಿರುವುದಾಗಿ ತಿಳಿಸುತ್ತಾ ಈಗಾಗಲೇ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು ಕ್ರೂಢೀಕರಿಸಿ ಹೇಳಿರುವ ಅಂಶಗಳನ್ನು ಯತಾವತ್ತಾಗಿ ನಮೂದಿಸಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಬೆಂಗಳೂರು ಇವರ ಮುಖಾಂತರ ಭಾರತ ಸರ್ಕಾರ, ಕೇಂದ್ರ ಅರಣ್ಯ ಮತ್ತು ಪರಿಸರ ಮಂತ್ರಾಲಯ, ನವದೆಹಲಿ ಇವರಿಗೆ ರವಾನಿಸುವುದಾಗಿ ತಿಳಿಸಿದರು. ಕೊನೆಗೆ ಪರಿಸರ ಅಧಿಕಾರಿಗಳಾದ ಡಾ. ದೊಡ್ಡಶಾನಯ್ಯ ಇವರು ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಪರಿಸರ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿದ ಸಾರ್ವಜನಿಕರು/ಸಂಸ್ಥೆಗಳ ಪ್ರತಿನಿಧಿಗಳು ಪ್ರಸ್ತಾವಿತ ಯೋಜನೆಯ ಬಗ್ಗೆ ಒಟ್ಟು 142 ಅಹವಾಲುಗಳು/ಅಭಿಪ್ರಾಯಗಳು/ಅನಿಸಿಕೆಗಳನ್ನು ಸಲ್ಲಿಸಿದ್ದು, ಅವುಗಳನ್ನು ಅನುಬಂಧ-4ರಲ್ಲಿ ಲಗತ್ತಿಸಿದೆ.

Senior Environmental Officer
Karnataka State Pollution Control Board
Bellary.

ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು
ಮತ್ತು ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಭೆ,
ಬಳ್ಳಾರಿ.